ಮಂಗಳವಾರ,17 ಏಪ್ರಿಲ್ 2018 | ಪುಟಗಳು: 14+4 | ಬೆಲೆ: ₹ 5.00
www.vijaykarnataka.com
ಸಂಪುಟ: 17 | ಸಂಚಿಕೆ: 261
VK
ವಿಜಯ ಕರ್ನಾಟಕ
ಮಂಗಳೂರು | ಬೆಂಗಳೂರು | ಮೈಸೂರು | ಶಿವಮೊಗ್ಗ | ಹುಬ್ಬಳ್ಳಿ | ಬಾಗಲಕೋಟ | ಕಲಬುರಗಿ



ನೈಟ್ ಕ್ಲಬ್ ಉದ್ಘಾಟಿಸಿ ವಿವಾದಕ್ಕೊಳಗಾದ ಬಿಜೆಪಿ ಸಂಸದ ಸಾಕ್ಷಿ ಮಹಾರಾಜ್ P09



ತರಕಾರಿ, ಬೇಳೆ ದರ ಇಳಿಕೆ ಪರಿಣಾಮ: ಮಾರ್ಚ್‌ನಲ್ಲಿ ಸಗಟು ದರ ಆಧಾರಿತ ಹಣದುಬ್ಬರ ಶೇ. 2.47ಕ್ಕೆ ಇಳಿಕೆ

ಶಂಕಿತ ಭಯೋತ್ಪಾದಕರ ಓಡಾಟ ವದಂತಿ: ಪಠಾಣ್‌ಕೋಟ್ ಜಿಲ್ಲೆಯಲ್ಲಿ ಹೈ ಅಲರ್ಟ್ P

# ನಾಳೆಯಿಂದ ಸಿಇಟಿ: 1.98 ಲಕ್ಷ ವಿದ್ಯಾರ್ಥಿಗಳು ಪರೀಕ್ಷೆಗೆ ಹಾಜರು

■ **ವಿಕ ಸುದ್ದಿಲೋಕ** ಬೆಂಗಳೂರು

ಎಂಜಿನಿಯರಿಂಗ್ ಸೇರಿದಂತೆ ಇತರ ವೃತ್ತಿ ಶಿಕ್ಷಣ ಕೋರ್ಸ್‌ಗಳ ಪ್ರವೇಶಕ್ಕೆ ಅವಕಾಶ ಕಲ್ಪಿಸುವ ಸಾಮಾನ್ಯ ಪ್ರವೇಶ ಪರೀಕ್ಷೆ (ಸಿಇಟಿ) ಏ. 18 ಮತ್ತು 19ರಂದು ರಾಜ್ಯದ 430 ಕೇಂದ್ರಗಳಲ್ಲಿ ನಡೆಯಲಿದ್ದು, ಪರೀಕ್ಷೆಯನ್ನು ಸುಸೂತ್ರವಾಗಿ ನಡೆಸಲು ಕರ್ನಾಟಕ ಪರೀಕ್ಷಾ ಪ್ರಾಧಿಕಾರ (ಕೆಇಎ) ಎಲ್ಲ ಸಿದ್ಧತೆ ಮಾಡಿಕೊಂಡಿದೆ.

ಈ ಬಾರಿ ಒಟ್ಟು 1,98,639 ಅಭ್ಯರ್ಥಿಗಳು ಪರೀಕ್ಷೆಗೆ ನೋಂದಣಿ ಮಾಡಿಕೊಂಡಿದ್ದಾರೆ. ಈ ಪೈಕಿ 1,00,077 ಮಂದಿ ವಿದ್ಯಾರ್ಥಿಗಳು ಹಾಗೂ 98,568 ಮಂದಿ ವಿದ್ಯಾರ್ಥಿನಿಯರಿದ್ದಾರೆ. ಬೆಂಗಳೂರಿನಲ್ಲಿ 86 ಕೇಂದ್ರಗಳಲ್ಲಿ ಪರೀಕ್ಷೆ• ನಡೆಯಲಿದೆ. ಪರೀಕ್ಷಾ ಕಾರ್ಯಕ್ಕಾಗಿ 430 ವೀಕ್ಷಕರು, 860 ಮಂದಿ ವಿಶೇಷ ಜಾಗೃತ ದಳದ ಸದಸ್ಯರು, 430 ಪ್ರಶ್ನೆ ಪತ್ರಿಕೆ ಪಾಲಕರು, 12,440 ಕೊಠಡಿ ಮೇಲ್ವಿಚಾರಕರು ಸೇರಿದಂತೆ ಒಟ್ಟು 31,360 ಅಧಿಕಾರಿ ಮತ್ತು ಸಿಬ್ಬಂದಿ ವರ್ಗದವರನ್ನು ನಿಯೋಜಿಸಲಾಗಿದೆ. ಆಯಾ ಜಿಲ್ಲೆಯ ಜಿಲ್ಲಾಧಿಕಾರಿಗಳು ಪ್ರತಿ ಪರೀಕ್ಷಾ ಕೇಂದ್ರಗಳಿಗೆ ಆಯುಕ್ತರ ಮಟ್ಟದ ಅಧಿಕಾರಿಗಳನ್ನು ವೀಕ್ಷಕರನ್ನಾಗಿ ನೇಮಿಸಿದ್ದಾರೆ. ''ಪರೀಕ್ಷಾ ದಿನಗಳಂದು ರಾಜ್ಯದ ಎಲ್ಲಾ ಪರೀಕ್ಷಾ ಕೇಂದ್ರಗಳು/ ಖಜಾನೆಗಳಿಗೆ ಹೆಚ್ಚಿನ ಪೊಲೀಸ್ ಭದ್ರತೆ ನೀಡುವ ಸಂಬಂಧ ಆಯಾ ಜಿಲ್ಲೆಯ ಎಸ್‌ಪಿಗಳಿಗೆ ಸೂಕ್ತ ನಿರ್ದೇಶನ ನೀಡಲು ರಾಜ್ಯ ಪೊಲೀಸ್ ಮಹಾನಿರ್ದೇಶಕರನ್ನು ಕೋರಲಾಗಿದೆ,'' ಎಂದು ಕೆಇಎ ಕಾರ್ಯನಿರ್ವಾಹಕ ನಿರ್ದೇಶಕಿ ವಿನೋತ್ ಪ್ರಿಯಾ ತಿಳಿಸಿದ್ದಾರೆ.



## ಮೇ 6ರಂದು 'ನೀಟ್'

**ವೈದ್ಯಕೀಯ, ದಂತ ವೈದ್ಯ ಹಾಗೂ ಆಯುಷ್ ಕೋರ್ಸ್‌ಗಳ ಪ್ರವೇಶಕ್ಕೆ ಅಭ್ಯರ್ಥಿಗಳು ಕೇಂದ್ರ ಪ್ರೌಢ ಶಿಕ್ಷಣ ಪರೀಕ್ಷಾ ಮಂಡಳಿ (ಸಿಬಿಎಸ್‌ಇ) ಮೇ 6ರಂದು ರಾಷ್ಟ್ರಮಟ್ಟದಲ್ಲಿ ನಡೆಸುವ ಏಕರೂಪದ ರಾಷ್ಟ್ರೀಯ ಅರ್ಹತಾ ಮತ್ತು ಪ್ರವೇಶ ಪರೀಕ್ಷೆ ('ನೀಟ್') ಬರೆಯುವುದು ಅನಿವಾರ್ಯವಾಗಿದೆ.**

## ವೇಳಾಪಟ್ಟಿ

**ಏ. 18ರಂದು ಬೆಳಗ್ಗೆ 10.30ರಿಂದ 11.50ರವರೆಗೆ ಜೀವಶಾಸ್ತ್ರ (60 ಅಂಕ), ಮಧ್ಯಾಹ್ನ 2.30ರಿಂದ 3.50ರವರೆಗೆ ಗಣಿತಶಾಸ್ತ್ರ (60 ಅಂಕ) ಪರೀಕ್ಷೆ ನಡೆಯಲಿದೆ. ಏ. 19ರಂದು ಬೆಳಗ್ಗೆ 10.30ರಿಂದ 11.50ರವರೆಗೆ ಭೌತಶಾಸ್ತ್ರ ಮಧ್ಯಾಹ್ನ 2.30ರಿಂದ 3.50ರವರೆಗೆ ರಸಾಯನಶಾಸ್ತ್ರ ಪರೀಕ್ಷೆ ನಡೆಯಲಿದೆ. ಏ.20ರಂದು ಬೆಳಗ್ಗೆ 11.30ರಿಂದ 12.30ರವರೆಗೆ ಹೊರನಾಡು ಹಾಗೂ ಗಡಿನಾಡು ಕನ್ನಡಿಗ ಅಭ್ಯರ್ಥಿಗಳಿಗೆ ಬೆಂಗಳೂರಿನಲ್ಲಿ ಮಾತ್ರ ಕನ್ನಡ ಭಾಷಾ ಪರೀಕ್ಷೆ ನಡೆಯಲಿದೆ. ಒಟ್ಟು 2,240 ಅಭ್ಯರ್ಥಿಗಳು ಈ ಪರೀಕ್ಷೆಗೆ ಹಾಜರಾಗಲಿದ್ದಾರೆ.**

DH
DECCAN HERALD
Tuesday April 17, 2018
www.deccanherald.com




Top
reje
prol
Kath
case

# 1.98 lakh candidates to write CET tomorrow

**BENGALURU:** A total of 1.98 lakh candidates have registered themselves to write the Karnataka Common Entrance Test (CET) which will be held on Wednesday and Thursday.

The examination is meant for securing admission to courses in engineering, agriculture sciences, veterinary sciences, pharmaceuticals, and other disciplines in the state's colleges. Of the 1,98,639 candidates who have registered, 1,00,071 are males and the remaining 98,568 are females.

The examination will be conducted in the offline mode over two days with Biology and Mathematics on Wednesday and Physics and Chemistry on Thursday. This will be held in 430 centres across the state, 86 of them being in Bengaluru alone.

The Kannada language test for Horanadu and Gadinadu Kannadiga candidates will be held on Friday in four centres in Bengaluru. A total of 2,240 candidates will be writing this paper.

The questions and answers for each subject will be printed both in English and Kannada. In case of any discrepancy between the two, the English version will be considered final. Students are advised to be present at their assigned centre half an hour before the start of the examination.

Deputy commissioners of all districts have been requested to appoint one observer to each examination centre. The police have been told to ensure adequate police security at all district treasuries and sub-treasuries where question papers are kept.

A total of 430 observers, 860 special invigilation squad members, 430 custodians, 12,440 Invigilators and a total of 31,360 officers have been deployed for the examination duty. For more instructions, students may check the website of the Karnataka Examinations Authority at http://kea.kar.nic.in/.

**DH News Service**

### Dos

- Carry hall ticket
- Carry ID card such as college ID, class 12 exam hall ticket,
- Aadhaar card, Bus pass
- Carry blue or black ballpoint pen
- Reach 30 min before start of the exam

### DON'TS

- Wear a wristwatch
- Carry a mobile/calculator/tablet

